# ಮೋಕ್ಷ ಹುಡುಕುತ ಪ್ರೀತಿಯ ಬಂಧನದಲಿ



ಸುಜಾತಾ ಸುಜಾತಾ
ಹೊಟ್ಟೆ ಹಸಿವು ಊಟ ತಾ
ಸಾಕು ಸಾಕು ಈ ಧ್ಯಾನ ಜ್ಞಾನ
ಬುದ್ಧನಾಗಲು ಹೊರಟವನಿಗೊಮ್ಮೆ
ನರಮಾನವನಾಗುವ ಬಯಕೆ
ಆಗಲೇ ಸಮಯ ಮೀರಿದೆ
ಶ್ರಾವಸ್ತಿ, ಬೋಧಗಯಾ, ಕಪಿಲವಸ್ತು, ಪಾಟಲೀಪುತ್ರ
ಎಲ್ಲೆಲ್ಲೂ ಅರ್ಧ ನಿಮೀಲಿತ ನೇತ್ರ
ಕಲ್ಲಿನಲ್ಲಿ, ತಾಮ್ರ, ಹಿತ್ತಾಳೆ,
ಲೋಹಗಳಲಿ ಬುದ್ಧನ ಚಿತ್ರ

ನಗುವ ತುಟಿಗಳಲ್ಲಿನ್ನೂ ಇದೆ ಎದೆ ಹಾಲ ಕಂಪು.

ಹೊತ್ತಾಯಿತು ಬಾ ಸುಜಾತಾ
ಎಲ್ಲಿ ನನ್ನ
ಪದಾತಿ ಪಾದುಕೆ ಪಲ್ಲಕಿ
ಬಿಲ್ಲು ಬಾಣ ರಥ ಸಾರೋಟು?
ಅವನೆಲ್ಲಿ
ಕರೆಕಳಿಸು ಅವನನ್ನು ಆ ಕಲ್ಲು ಕುಟಿಗನನ್ನು
ಉಳಿ ಭೈರಿಗೆ ಸುತ್ತಿಗೆ ಸಮೇತ
ಕಲ್ಲಿನಲಿ ಕೆತ್ತಿದ ತಥಾಗತನ ಮರಳಿ
ಬಂಡೆಗಲ್ಲು ಮಾಡಲು ಹೇಳು.

ಎಲೆ ಕವಿಯೆ ಎಷ್ಟು ದಿನ ಕಾಯುವೆ ನೀನು
ಪೂರ್ಣ ಕವಿತೆಗಾಗಿ?
ಸಂಪೂರ್ಣತೆಯೆಂಬುದು ಎಲ್ಲಿಯೂ ಇಲ್ಲ
ಬುದ್ಧನಲ್ಲೂ
ಅಪೂರ್ಣತೆಯಲ್ಲೇ ಕವಿತೆಯ ಜೀವ
ಅದು ಬಂದ ದಿನ
ಈ ಜಗದ ಕವಿಗಳಿಗೆಲ್ಲ ಇಲ್ಲೇನು ಕೆಲಸ?

ವಾಗೀಶ ಹೆಗಡೆ